ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ : ಕಾಶಿಇ/ಶೈವಿ/218/ಭಾ.ಸ್ಕೌ.ಗೈಡ್ಸ್/2020-21
(ಭಾಗ-2)

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಅರಮನೆ ರಸ್ತೆ. ಬೆಂಗಳೂರು – 560001.
ದಿನಾಂಕ : 01.02.2024.

**ಅಧಿಕೃತ ಜ್ಞಾಪನ**

ವಿಷಯ : ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ವತಿಯಿಂದ ಆಯೋಜಿಸಿರುವ ಶಿಬಿರದಲ್ಲಿ ಭಾಗವಹಿಸುವ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ : ರಾಜ್ಯ ಮುಖ್ಯ ಆಯುಕ್ತರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ: BSG/SHQ/2423/2023-24. ದಿ: 22.01.2024.

***********

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ, ಬೀದರ್ ಜಿಲ್ಲೆ ಹಾಗೂ ಶಾಹಿನ್ ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ ಶಾಹಿನ್ ಗ್ರೂಪ್ ಸಂಸ್ಥೆ, ಅಲಮ್ ಇಕ್ಬಾಲ್ ಎಜುಕೇಶನ್ ಸೊಸೈಟಿ, ಶಾಹಿನ್ ನಗರ, ಶಹಪುರ ಗೇಟ್, ಬೀದರ್ ಇಲ್ಲಿ ದಿನಾಂಕ: 04.02.2024 ರಿಂದ 07.02.2024 ರವರೆಗೆ ರೋವರ್ಸ್ – ರೇಂಜರ್ಸ್‌ಗಳಿಗೆ **"ರಾಜ್ಯಮಟ್ಟದ ಸಾಹಸ ಮತ್ತು ಪಯೋನರಿಂಗ್ ಶಿಬಿರ"** ವನ್ನು ಆಯೋಜಿಸಲಾಗಿದ್ದು, ಸದರಿ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯಿರುವ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ.

ಈ ಸಂಬಂಧ, ಸದರಿ ಶಿಬಿರದಲ್ಲಿ ಭಾಗವಹಿಸುವ ರೋವರ್ಸ್ ರೇಂಜರ್ಸ್‌ಗಳಿಗೆ ಹಾಜರಾತಿ ಪ್ರಮಾಣಪತ್ರವನ್ನು ಒಪ್ಪಿಸುವ ನಿಬಂಧನೆಗೊಳಪಟ್ಟು, ಸರ್ಕಾರ/ಇಲಾಖೆಯ ಮೇಲೆ ಆರ್ಥಿಕ ಹೊರೆಯಾಗದಂತೆ ಅನ್ಯಕಾರ್ಯನಿಮಿತ್ತ ರಜೆ ಮಂಜೂರು ಮಾಡಲಾಗಿದೆ.

**ಅಡಕ: ಮಾಹಿತಿ ಪತ್ರ**

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸದರಿ ತರಬೇತಿಯಲ್ಲಿ ಭಾಗವಹಿಸುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

P.G.R. SINDHIA, B.E.(Civil)
STATE CHIEF COMMISSIONER
Former Minister for Health, Finance,
Home, Industries & Transport
Government of Karnataka

State Headquarters
No. 39, "Shanthigruha"
Palace Road
Bengaluru-560 001

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## THE BHARAT SCOUTS & GUIDES, KARNATAKA

Ref : BSG/SHQ/2423/2023-24 Date : 22-01-2024

ಮಾನ್ಯರೆ,

ವಿಷಯ: ರಾಜ್ಯ ಮಟ್ಟದ ಸಾಹಸ ಮತ್ತು ಪಯೋನಿಯರಿಂಗ್ ಶಿಬಿರದಲ್ಲಿ ಭಾಗವಹಿಸುವ ರೋವರ್ ಮತ್ತು ರೇಂಜರ್‌ಗಳ ನೊಂದಣಿ ಶುಲ್ಕ ಹಾಗೂ ಪ್ರಯಾಣ ಭತ್ಯೆಯನ್ನು ಕಾಲೇಜಿನ ರೋವರ್-ರೇಂಜರ್ ನಿಧಿಯಿಂದ ಭರಿಸಲು ಅನುಮತಿಯನ್ನು ಕೋರಿ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ಬೀದರ ಜಿಲ್ಲೆ ಹಾಗೂ ಶಾಹಿನ್ ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ: 4 ರಿಂದ 7 ಫೆಬ್ರವರಿ 2024ರ ವರೆಗೆ ಶಾಹಿನ್ ಗ್ರೂಪ್ ಸಂಸ್ಥೆ, ಅಲ್ಲಮ್ ಇಕ್ಬಾಲ್ ಎಜುಕೇಷನ್ ಸೊಸೈಟಿ, ಶಾಹಿನ್ ನಗರ, ಶಹಪುರ ಗೇಟ್, ಬೀದರ ಜಿಲ್ಲೆ, ಬೀದರ ಇಲ್ಲಿ ರೋವರ್ಸ್-ರೇಂಜರ್ಸ್‌ಗಳಿಗೆ "ರಾಜ್ಯ ಮಟ್ಟದ ಸಾಹಸ ಮತ್ತು ಪಯೋನಿಯರಿಂಗ್ ಶಿಬಿರ"ವನ್ನು ಆಯೋಜಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರಾಜ್ಯ ಮಟ್ಟದ ಸಾಹಸ ಮತ್ತು ಪಯೋನಿಯರಿಂಗ್ ಶಿಬಿರ |
| ದಿನಾಂಕ | 4 ರಿಂದ 7 ಫೆಬ್ರವರಿ 2024ರ ವರೆಗೆ |
| ಸ್ಥಳ | ಶಾಹಿನ್ ಗ್ರೂಪ್ ಸಂಸ್ಥೆ, ಅಲ್ಲಮ್ ಇಕ್ಬಾಲ್ ಎಜುಕೇಷನ್ ಸೊಸೈಟಿ, ಶಾಹಿನ್ ನಗರ, ಶಹಪುರ ಗೇಟ್, ಬೀದರ ಜಿಲ್ಲೆ, ಬೀದರ |
| ಹಾಜರಾಗುವ ದಿನಾಂಕ ಮತ್ತು ಸಮಯ | 03.02.2024ರ ಸಂಜೆ 03.00 ಗಂಟೆಯೊಳಗೆ |
| ಬಿಡುಗಡೆ ಮಾಡುವ ದಿನಾಂಕ | 07.02.2024 ರ ಊಟದ ನಂತರ |
| ಶಿಬಿರದ ವಿಶೇಷತೆ | ಪಯೋನಿಯರಿಂಗ್ ಪ್ರಾಜೆಕ್ಟ್‌ಗಳ ನಿರ್ಮಾಣ ಮತ್ತು ಕಟ್ಟುವ ಕಲೆ ಕಲಿಸುವುದು. |
| ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ ಕೋಟಾ | 02 ರೋವರ್ಸ್ + 02 ರೇಂಜರ್ + ಒಬ್ಬರು ದಳನಾಯಕರು. |
| ಪ್ರಯಾಣ ವೆಚ್ಚ | ಆಯಾ ಕಾಲೇಜಿನ ರೋವರ್ಸ್-ರೇಂಜರ್ಸ್ ನಿಧಿಯಿಂದ ಭರಿಸುವುದು |
| ನೊಂದಣಿ ಶುಲ್ಕ | ತಲಾ ರೂ 50/- |
| ಊಟ ಮತ್ತು ವಸತಿ ವ್ಯವಸ್ಥೆ | ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಯಿಂದ ಏರ್ಪಡಿಸಲಾಗುವುದು. |

ಸದರಿ ಶಿಬಿರದಲ್ಲಿ ಭಾಗವಹಿಸುವ ರೋವರ್-ರೇಂಜರ್‌ಗಳ ಶಿಬಿರ ಶುಲ್ಕ ರೂ.50/- ಮತ್ತು ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜಿನ ರೋವರ್ಸ್-ರೇಂಜರ್ಸ್‌ಗಳ ನಿಧಿಯಿಂದ ಭರಿಸಲು ತಾವು ಅನುಮತಿಯ ಆದೇಶ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿದೆ.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್.ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಶ್ರೀ ಜಿ. ಜಗದೀಶ್‌ರವರು, ಭಾ.ಆ.ಸೇ
ಮಾನ್ಯ ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ,
ಬೆಂಗಳೂರು-560001.

Ph: (O) 080-22343400, 22260017, 22267470, 22261047
080-2653..., 2658...
info@bsgkarnataka.org
www.bsgkarnataka.org
Mob: 0984537195...
pgrsindhia@gmail...